RNU AIR DHARWAD

SEPTEMBER 25, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ನವರಾತ್ರಿಯ ನಾಲ್ಕನೇ ದಿನವಾದ ಇಂದು, ಕೂ ್ಮಾಂಡಾ ದೇವಿಗೆ ಶ್ರದ್ಧಾ–ಭಕ್ತಿಯ ಪೂಜೆ, ನಾಡಿನಾದ್ಯಂತ ದುರ್ಗಾದೇವಿ ಮಂದಿರಗಳಲ್ಲಿ, ವಿಶೇಷವಾಗಿ ಸಲ್ಲುತ್ತಿದೆ. 'ಅಮೋಘ ಶಕ್ತಿ ಸ್ವರೂಪಿಣಿಯಾಗಿ, ಕಿರಣ ಜ್ಯೋತಿಯಾಗಿ ಪ್ರಕಾಶಿಸುವ ದೇವಿ, ಜೀವನದಲ್ಲಿ ಸಾಧಿಸಲು, ಎಲ್ಲರಿಗೂ ಶಕ್ತಿ ನೀಡಲಿ', ಎಂದು ಕೈಗಾರಿಕೆಗಳ ಖಾತೆ ಸಚಿವ ಎಂ.ಬಿ.ಪಾಟೀಲ, ನಾಡವರಿಗೆ ಶುಭ ಹಾರೈಸಿದ್ದಾರೆ.**

<><><>

**ಪದ್ಮವಿಭೂಷಣ, ಎಸ್.ಎಲ್.ಭೈರಪ್ಪ ಅವರ, ಪಾರ್ಥಿವ ಶರೀರವನ್ನು, ಇಂದು ಮಧ್ಯಾಹ್ನ 1 ಗಂಟೆ ಬಳಿಕ, ಬೆಂಗಳೂರಿನಿಂದ, ಮೈಸೂರಿನ ಕುವೆಂಪು ನಗರದ, ಅವರ ನಿವಾಸಕ್ಕೆ ಕೊಂಡೊಯ್ಯಲಾಗುತ್ತಿದೆ. ಬಳಿಕ, ಮೈಸೂರಿನ ಕಲಾ ಮಂದಿರದಲ್ಲಿ ಸಾರ್ವಜನಿಕರ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗುತ್ತಿದೆ. ಮೈಸೂರು ಜಿಲ್ಲಾಡಳಿತ, ಸರ್ಕಾರದಿಂದ ಸಕಲ ಗೌರವ ಸಲ್ಲಿಸಲು, ಸಿದ್ಧತೆ ಕೈಗೊಂಡಿದೆ.**

<><><>

**ರಾಷ್ಟ್ರೀಯ ಸ್ವಯಂಸೇವಕ ಸಂಘದ, ಸರ ಕಾರ್ಯವಾಹ ದತ್ತಾತ್ರೇಯ ಹೊಸಬಾಳೆ, ಕಾಶಿ ಪೀಠಾಧಿಪತಿ ಶ್ರೀ ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಸೇರಿದಂತೆ, ಅನೇಕ ಗಣ್ಯರು ಕಂಬನಿ ಮಿಡಿದಿದ್ದಾರೆ.**

<><><>

**'ಸ್ವಸ್ಥ ನಾರಿ, ಸಶಕ್ತ ಪರಿವಾರ ಅಭಿಯಾನ'ದಡಿ, ಬೆಂಗಳೂರಿನ ನಿಮ್ಹಾನ್ಸ್ ಹಾಗೂ ಕಿದ್ವಾಯಿ ಸ್ಮಾರಕ ಆಸ್ಪತ್ರೆಗಳ ಸಹಯೋಗದಲ್ಲಿ, ಮಹಿಳೆಯರಿಗೆ ಉಚಿತ, ಕ್ಯಾನ್ಸರ್ ತಪಾಸಣೆ ಜರುಗಿತು. 70ಕ್ಕೂ ಅಧಿಕ ಮಹಿಳೆಯರು ಶಿಬಿರದ ಪ್ರಯೋಜನ ಪಡೆದರು.**

<><><>

**ಧಾರವಾಡ ಆಕಾಶವಾಣಿ ಕೇಂದ್ರದಲ್ಲಿ, ರೋಟರಿ ಕ್ಲಬ್ ಸಹಯೋಗದಲ್ಲಿ, ಇಂದು, ಅಧಿಕಾರಿ ಮತ್ತು ಸಿಬ್ಬಂದಿ ವರ್ಗಕ್ಕೆ, ಉಚಿತ ಆರೋಗ್ಯ ತಪಾಸಣಾ ಶಿಬಿರ, 'ಸ್ವಸ್ಥ ನಾರಿ, ಸಶಕ್ತ ಪರಿವಾರ'ದಡಿ, ಆಯೋಜಿತವಾಗಿದೆ.**

<><><>

**ಸ್ವಚ್ಛತಾ ಹೀ ಸೇವಾ ಅಭಿಯಾನ – 2025ರ ಅಂಗವಾಗಿ, ಮೈಸೂರು ಮಹಾನಗರ ಪಾಲಿಕೆ, ಅರಮನೆ ಬಳಿಯ ಕೋಟೆ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಸುತ್ತಲೂ, ಹಲವು ಸಂಘಟನಗಳ ಸ್ವಯಂಸೇವಕರೊಂದಿಗೆ, ಸ್ವಚ್ಛತಾ ಕಾರ್ಯ ಕೈಗೊಂಡಿತು.**

<><><>

‘ಏಕಾತ್ಮ ಮಾನವ ದರ್ಶನ’ ಹಾಗೂ ಅಂತ್ಯೋದಯ ಪರಿಕಲ್ಪನೆಯ ಹರಿಕಾರ, ರಾಷ್ಟ್ರವಾದಿ ನಾಯಕ, ಪಂಡಿತ ದೀನ ದಯಾಳ ಉಪಾಧ್ಯಾಯರ ಜನ್ಮ ದಿನವಿಂದು. ಬಿಜೆಪಿ ರಾಜ್ಯಾಧ್ಯಕ್ಷ, ಬಿ.ವೈ. ವಿಜಯೇಂದ್ರ ಗೌರವ ನಮನ ಸಲ್ಲಿಸಿ, ‘ಲಕ್ಷಾಂತರ ಕಾರ್ಯಕರ್ತರಿಗೆ ಸರ್ವಕಾಲಿಕ ಪ್ರೇರಣಾ ಸ್ವರೂಪಿ, ಪಂಡಿತ್ ಜೀ ಅವರ, ಜೀವನ ಹಾಗೂ ಸಂದೇಶಗಳು, ದಾರಿದೀಪ’ ಎಂದಿದ್ದಾರೆ.

<><><>

ಮಾಹಿತಿ ತಂತ್ರಜ್ಞಾನದಡಿ, ನವೋದ್ಯಮಗಳಿಗೆ ಪೂರಕವಾಗಿ, ರಾಜ್ಯದ ಆರು ಕ್ಲಸ್ಟರ್‌ಗಳಿಗೆ, ಸಂಶೋಧನೆ ಮತ್ತು ಸ್ಟಾರ್ಟ್‌ಅಪ್ ಒಳಗೊಂಡ ಯೋಜನೆಗಳಿಗೆ, ಸಾವಿರ ಕೋಟಿ ರೂಪಾಯಿ ಅನುದಾನ ಘೋಷಿಸಲಾಗಿದೆ ಎಂದು, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಖಾತೆ ಸಚಿವ ಪ್ರಿಯಾಂಕ ಖರ್ಗೆ, ತಿಳಿಸಿದ್ದಾರೆ. ಮಂಗಳೂರಿನಲ್ಲಿ ಮಾತನಾಡಿದ ಅವರು, ಮಂಗಳೂರು, ಉಡುಪಿ, ಮಣಿಪಾಲವನ್ನು ಒಳಗೊಂಡ, ಒಂದು ಕ್ಲಸ್ಟರ್ ಸೇರಿ, ರಾಜ್ಯದ ಒಟ್ಟು ಆರು ಕ್ಲಸ್ಟರ್‌ಗಳಿಗೆ, ಈಗಾಗಲೇ 250 ಕೋಟಿ ರೂಪಾಯಿ ಬಿಡುಗಡೆಯಾಗಿದೆ ಎಂದರು.

<><><>

‘ಆರೋಗ್ಯದ ಬಗ್ಗೆ ಯೋಚನೆ: ಔಷಧ ತಜ್ಞರ ಯೋಚನೆ!’ ಧ್ಯೇಯದೊಂದಿಗೆ, ಇಂದು, ವಿಶ್ವ ಫಾರ್ಮಾಸಿಸ್ಟ್ ದಿನ ಆಚರಿಸಲಾಗುತ್ತಿದೆ. ಸಮಾಜದ ಆರೋಗ್ಯ ಕಾಪಾಡಲು, ಸಮರ್ಪಣಾ ಮನೋಭಾವದಿಂದ, ಕರ್ತವ್ಯ ನಿರ್ವಹಿಸುತ್ತಿರುವ, ಎಲ್ಲ ಔ ’ಧ ತಜ್ಞರ ಪರಿಶ್ರಮಕ್ಕೆ, ಕೃತಜ್ಞತೆ ಸಲ್ಲಿಸುವ ದಿನ.

<><><>

ಸರ್ಕಾರ ಮತ್ತು ಜನರ ನಡುವಿನ, ಕೊಂಡಿಯಂತೆ ಕೆಲಸ ಮಾಡುವ, ಸರ್ಕಾರಿ ನೌಕರರಿಗೆ, ಆರೋಗ್ಯ ಭದ್ರತೆ ಕಲ್ಪಿಸಿದ್ದಾಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ, ಆರೋಗ್ಯ ಸಂಜೀವಿನಿ ಯೋಜನೆಯನ್ನು, ಅಕ್ಟೋಬರ್ 1 ರಿಂದ ಜಾರಿ ಮಾಡಲಾಗುತ್ತಿದೆ. ಸರ್ಕಾರಿ ನೌಕರರು ಹಾಗೂ ಅವರ ಕುಟುಂಬದವರಿಗೆ, ನಗದು ರಹಿತ ಗುಣಮಟ್ಟದ ಚಿಕಿತ್ಸಾ ಸೌಲಭ್ಯ ಸಿಗಲಿದೆ ಎಂದು, ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ.

<><><>

ವಿಜಯಪುರ ಜಿಲ್ಲೆಗೆ, ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯ ಮಂಜೂರು ಮಾಡುವಂತೆ, ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಕೇಂದ್ರದ ಆರೋಗ್ಯ ಖಾತೆ ಸಚಿವ ಜೆ.ಪಿ.ನಡ್ಡಾ ಅವರಿಗೆ, ಮನವಿ ಮಾಡಿದ್ದಾಗಿ, ಸಂಸದ ರಮೇಶ ಜಿಗಜಿಣಗಿ ತಿಳಿಸಿದ್ದಾರೆ. ವಿಜಯಪುರದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಭಾರೀ ಮಳೆಯಿಂದ ಬೆಳೆ ಹಾನಿಯಾಗಿದೆ. ಕೂಡಲೇ ರಾಜ್ಯ ಸರ್ಕಾರ, ಸಮೀಕ್ಷೆ ವರದಿ ಆಧರಿಸಿ, ರೈತರಿಗೆ ಸೂಕ್ತ ಪರಿಹಾರ ವಿತರಿಸಿ, ಸಂಕಷ್ಟದಿಂದ ಪಾರು ಮಾಡಬೇಕು ಎಂದು, ಆಗ್ರಹಿಸಿದರು.

<><><>

ಕೋರಮಂಗಲ–ಚಳ್ಳಘಟ್ಟ ಕಣಿವೆ, ಕೆರೆ ತುಂಬಿಸುವ ಹಾಗೂ ನೀರೆತ್ತಿ ನೀರಾವರಿ ಕಲ್ಪಿಸುವ, ಕೆ.ಸಿ. ವ್ಯಾಲಿ ಯೋಜನೆ ಅಡಿ, ಡಿಸೆಂಬರ್ ಅಂತ್ಯದ ವೇಳೆಗೆ, 440 ಎಂ.ಎಲ್.ಡಿ. ನೀರು ಹರಿಯಲಿದ್ದು, ಜಿಲ್ಲೆಯ 6 ತಾಲೂಕುಗಳ ಕೆರೆಗಳನ್ನು ತುಂಬಲಾಗುವುದು ಎಂದು, ಮಾಜಿ ವಿಧಾನಸಭಾಧ್ಯಕ್ಷ ಕೆ.ಆರ್.ರಮೇಶ ಕುಮಾರ ತಿಳಿಸಿದ್ದಾರೆ. ಕೋಲಾರಮ್ಮ ದೇವಾಲಯದಲ್ಲಿ, ನವರಾತ್ರಿ ಅಂಗವಾಗಿ, ಪೂಜೆ ಸಲ್ಲಿಸಿ ಅವರು ಮಾತನಾಡಿದರು. ಇಂದು ರಾಮಸಾಗರ ಸಮೀಪ, ಕೆ.ಸಿ. ವ್ಯಾಲಿಗೆ ಭೇಟಿ ನೀಡುವುದಾಗಿ, ಹೇಳಿದರು.

<><><>

ಈ ತಿಂಗಳ 28, ಕೊನೆ ಭಾನುವಾರದಂದು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ, ‘ಮನ್ ಕೀ ಬಾತ್’ ನ, 126ನೇ ಆವೃತ್ತಿ, ಆಕಾಶವಾಣಿ ಮೂಲಕ ಪ್ರಸಾರವಾಗಲಿದೆ. ನಮೋ ಆಪ್ ಅಥವಾ My Gov ಜಾಲತಾಣದ ಮೂಲಕ, ಅಥವಾ 1800-11-7800 ಗೆ ಕರೆ ಮಾಡಿ, ಸಾರ್ವಜನಿಕರು ತಮ್ಮ ಸಲಹೆ ದಾಖಲಿಸಬಹುದು.

<><><>

ನೆರೆಯ, ಮಹಾರಾಷ್ಟ್ರ ರಾಜ್ಯದ, ವೀರ್, ಉಜನಿ, ಸಿನಾ ಜಲಾಶಯ ಹಾಗೂ ಬೋರಿ ನದಿಯಿಂದ, ಒಟ್ಟಾರೆ ಎರಡೂವರೆ ಲಕ್ಷ ಕ್ಯೂಸೆಕ್ ನೀರು ಹರಿಬಿಡಲಾಗಿದೆ. ಇಂದು ಸಂಜೆ ಹೊತ್ತಿಗೆ, ಕಲಬುರಗಿ ಜಿಲ್ಲೆಯ, ಅಫಜಲಪೂರ ತಾಲೂಕಿನ, ಸೊನ್ನ ಬ್ಯಾರೇಜಿಗೆ ನೀರು ತಲುಪಲಿದ್ದು, ಭೀಮಾ ನದಿಯ ಹರಿವು ಹೆಚ್ಚಲಿದೆ. ನದಿ ದಂಡೆಯ ಗ್ರಾಮಸ್ಥರು, ಮುಂಜಾಗ್ರತೆ ವಹಿಸುವಂತೆ, ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್, ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

<><><>

ಉತ್ತರ ಒಳನಾಡು ಜಿಲ್ಲೆಗಳಲ್ಲಿ, ನಾಳೆ ಮತ್ತು ನಾಡಿದ್ದು, ವ್ಯಾಪಕವಾಗಿ ಸಾಧಾರಣದಿಂದ, ಭಾರಿ ಮಳೆ; ಇನ್ನುಳಿದ ದಿನಗಳಲ್ಲಿ, ಚದುರಿದಂತೆ ವ್ಯಾಪಕವಾಗಿ, ಸಾಧಾರಣ ಮಳೆಯಾಗಲಿದೆ ಎಂದು, ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ, ತಿಳಿಸಿದೆ. ಕರಾವಳಿ ಹಾಗೂ ಮಲೆನಾಡು ಜಿಲ್ಲೆಗಳಲ್ಲಿ, ನಾಳೆ ಮತ್ತು ನಾಡಿದ್ದು, ವ್ಯಾಪಕವಾಗಿ ಸಾಧಾರಣ ಮಳೆ ಹಾಗೂ ಅಲ್ಲಲ್ಲಿ ಭಾರಿ ಮಳೆ ನಿರೀಕ್ಷಿಸಲಾಗಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.